C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.132/2021

ದಿನಾಂಕಃ 28.06.2022 ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:3 ಪಿ. ಡಬ್ಲ್ಯೂ:1

| | |
|---|---|
| ಸಾಕ್ಷಿದಾರರ ಹೆಸರು | ಮಂಜುನಾಥ |
| ತಂದೆಯ ಹೆಸರು | ಚನ್ನೇಗೌಡ |
| ವಯಸ್ಸು | 36 ವರ್ಷ |
| ಉದ್ಯೋಗ | ಖಾಸಗಿ ಉದ್ಯೋಗ |
| ವಾಸ | ವಿಜಯನಗರ, ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಎಸ್.ಸಿ.ಮಂಜುನಾಥ ಬಿನ್ ಚನ್ನೇಗೌಡ, ಯಲಿಯೂರು ಗ್ರಾಮ, ಕೊತ್ತತ್ತಿ ಹೋಬಳಿ, ಮಂಡ್ಯ ಎಂದರೆ ನಾನೇ. ಕಳೆದ 4 ತಿಂಗಳಿನಿಂದ ಬೆಂಗಳೂರಿನ ವಿಜಯನಗರದಲ್ಲಿ ವಾಸವಿದ್ದೇನೆ. ನನಗೆ ತೋರಿಸಿದ, " ಪಂಚಾಯಿತಿದಾರರಿಗೆ ನೀಡುವ ನೋಟಿಸಿನಲ್ಲಿ " ನನ್ನ ಸಹಿ ಇದೆ. ಸದರಿ ನೋಟೀಸ್ನು ನಿಶಾನೆ.ಪಿ.1 ಎಂದು ಸಹಿಯನ್ನು ನಿಶಾನೆ.ಪಿ.1(ಎ) ಎಂದು ಗುರುತಿಸಲಾಯಿತು. ಒಂದು ವರ್ಷದ ಹಿಂದೆ ನಾನು ಸುಂಡಹಳ್ಳಿಯಲ್ಲಿ ಇರುವ ನನ್ನ ಗದ್ದೆ ಹತ್ತಿರ ಹೋಗುತ್ತಿದ್ದಾಗ ಅಲ್ಲಿ ಪೊಲೀಸರು ಕರೆದು ಸಹಿ ಹಾಕಿಸಿಕೊಂಡರು. ನಮ್ಮ ಗದ್ದೆಯ ಪಕ್ಕದಲ್ಲಿ ನಾಲೆ ಇದೆ. ಪೊಲೀಸರು ಯಾವ ಕಾರಣಕ್ಕೆ ಗದ್ದೆಯ ಪಕ್ಕದಲ್ಲಿ ಬಂದಿದ್ದರು ಅಂತ ಗೊತ್ತಿಲ್ಲ. ಮಹಜರ್ ಗೆ ಸಹಿ ಹಾಕು ಅಂತ ಹೇಳಿದ್ದರಿಂದ ಸಹಿ ಮಾಡಿದೆನು. ಮಹಜರ್ ಗೆ ನಾನು ಸಹಿ ಮಾಡಿದ ಮೇಲೆ ಮರ್ಡರ್ ಆಗಿದೆ ಅಂತ ಗೊತ್ತಾಯಿತು. ಕೊಲೆಯಾಗಿದ್ದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ನಾನು ಶವವನ್ನು , ಸಹಿ ಮಾಡಿದ ಮೇಲೆ ನೋಡಿದೆನು. ಈಗ ತೋರಿಸಿದ ಫೋಟೋದಲ್ಲಿ ನಾನು, ರಾಜೇಶ ಮತ್ತು ಅಭಿಜಿತ್ ಇದ್ದೇವೆ. ಈಗ ತೋರಿಸಿದ 2 ನೇ ಫೋಟೋದಲ್ಲಿ ಶವ ಇದೆ. ಸದರಿ ಫೋಟೋಗಳನ್ನು ನಿಶಾನೆ.ಪಿ.2 ಮತ್ತು 3 ಅಂತ ಗುರುತಿಸಲಾಯಿತು. ಸಾಕ್ಷಿಯು, ಅವರಿಗೆ ತೋರಿಸಿದ 3 ಮತ್ತು 4 ನೇ ಫೋಟೋವನ್ನು ಗುರುತಿಸಿರುವುದಿಲ್ಲ. ಸ್ಥಳದಲ್ಲಿ ಕೊಲೆಗೆ ಸಂಬಂಧಪಟ್ಟಂತೆ ಯಾವುದೇ ವಸ್ತುವನ್ನು ನಾನು ನೋಡಲಿಲ್ಲ. ಪೊಲೀಸರು ಮರ್ಡರ್ ಆಗಿದೆ ಅಂತ ನನಗೆ ಹೇಳಿದರು. ಸಾಕ್ಷಿದಾರರಿಗೆ ನ್ಯಾಯಾಲಯದ ಮುಂದಿರುವ ರಕ್ತಸಿಕ್ತವಾದ ಮಣ್ಣನ್ನು, ರಕ್ತ ಕಲೆ ಇರುವ ಒಂದು

ಹಿಡಿಯಷ್ಟು ಗಾತ್ರದ ಕಾಡು ಕಲ್ಲು, ರಕ್ತ ಕಲೆ ಇರುವ ಎರಡು ಹಿಡಿಯಷ್ಟು ಗಾತ್ರದ ಒಂದು ಕಾಡು ಕಲ್ಲು, ರಕ್ತದ ಕಲೆ ಇರುವ ಹಳದಿ ಬಣ್ಣದ 150 ಎಂ.ಎಲ್ ನ ಫ್ರೂಟಿಯ ಖಾಲಿ ಟೆಟ್ರಾ ಪ್ಯಾಕ್, ರಕ್ತದ ಕಲ ಇರುವ ಹಳದಿ ಬಣ್ಣದ 180 ಎಂ.ಎಲ್ ನ ಓಲ್ಡ್ ಅಡ್ಮಿರಲ್ ಬ್ರಾಂದಿಯ ಟೆಟ್ರಾ ಪ್ಯಾಕ್, ರಕ್ತದಂತಹ ಕಲೆಯಾಗಿದ್ದ ಒಂದು ಹಿಡಿಯಷ್ಟು ರಕ್ತ ಮಿಶ್ರಿತ ಮಣ್ಣು ಮತ್ತು ಒಂದು ಹಿಡಿಯಷ್ಟು ಸಾದಾ ಮಣ್ಣನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ಗುರುತಿಸಿರುವುದಿಲ್ಲ. ಸದರಿ ವಸ್ತುಗಳ ಮೇಲೆ ಇದ್ದ ಅಂಟಿಸಿದ ಚೀಟಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮೃತನು ಯಾವ ರೀತಿ ಕೊಲಲ್ಪಟ್ಟಿದ್ದ ಅಂತ ನನಗೆ ಗೊತ್ತಿಲ್ಲ. ಮೃತ ವ್ಯಕ್ತಿಗೆ ಸಂಬಂಧಪಟ್ಟವರು ಮಹಜರ್ ಸಮಯದಲ್ಲಿ ಯಾರು ಇದ್ದರು ಅಂತ ನನಗೆ ಗೊತ್ತಿಲ್ಲ. ಮಹಜರ್ ಗೆ ನಾನು ಮತ್ತು ಚಾಸಾ.2 ಸಹಿ ಮಾಡಿದ್ದೇವೆ. ಸ್ಥಳದಲ್ಲಿ ಒಬ್ಬರು ಹೆಂಗಸು ಇದ್ದರು. ಈಗ ನನಗೆ ತೋರಿಸಿದ ಮಹಜರ್ ನಲ್ಲಿ ನನ್ನ ಸಹಿ ಇದ್ದು ಸದರಿ ಮಹಜರನ್ನು ನಿಶಾನೆ.ಪಿ.4 ಎಂದು , ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.4(ಎ) ಎಂದು ಗುರುತಿಸಲಾಯಿತು. ಮಹಜರ್ ಗೆ 3 ಕಡೆ ಸಹಿ ಮಾಡಿಸಿಕೊಂಡಿದ್ದರು. ಎಲ್ಲೆಲ್ಲಿ ಅಂತ ಈಗ ಹೇಳಲು ಆಗುವುದಿಲ್ಲ. ಶವ ಪಂಚನಾಮೆಯಲ್ಲಿ ಇರುವ ಸಹಿ ನನ್ನುದು ಶವ ಪಂಚನಾಮೆಯನ್ನು ನಿಶಾನೆ.ಪಿ.5 ಎಂದು , ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಶವ ಪಂಚನಾಮೆ ಕಾಲದ ಫೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಒಂದು ಫೋಟೋವನ್ನು ನೋಡಿ ಅದರಲ್ಲಿ ಇರುವುದು ನಾನು ಚಾಸಾ.2 ಮತ್ತು ಚಾಸಾ.4 ಎಂದು ಗುರುತಿಸಿರುತ್ತಾರೆ. ಆದ್ದರಿಂದ ಆ ಫೋಟೋವನ್ನು ನಿಶಾನೆ.ಪಿ.6 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ತೋರಿಸಿದ ಇನ್ನೊಂದು ಫೋಟೋವನ್ನು ನೋಡಿ, ಅದನ್ನು ಶವ ತೆಗೆದುಕೊಂಡು ಹೋಗುವಾಗ ರೋಡ್ ಸೈಡ ಅಲ್ಲಿ ತೆಗೆದಿದ್ದ ಫೋಟೋ ಎಂದು ಗುರುತಿಸಿರುತ್ತಾರೆ. ಆದ್ದರಿಂದ ಆ ಫೋಟೋವನ್ನು ನಿಶಾನೆ.ಪಿ.7 ಎಂದು ಗುರುತಿಸಲಾಯಿತು., ಸಾಕ್ಷಿಯ ಅವರಿಗೆ ತೋರಿಸಿದ ಇನ್ನೆರಡು ಫೋಟೋಗಳನ್ನು ಗುರುತಿಸಿರುವುದಿಲ್ಲ.

ಫೋಟೋದಲ್ಲಿ ಶವದ ಮೇಲೆ ಇರುವ ಬಟ್ಟೆ, ವಾಚು, ಚಪ್ಪಲಿಗಳನ್ನು ನಾನು ನೋಡಿರುವುದಿಲ್ಲ. ಈಗ ನನಗೆ ತೋರಿಸಿದ ರಕ್ತದ ಕಲೆ ಇರುವ ಮಾಸಲು ಹಸಿರು , ನಿಲಿ, ಬಿಳಿ ಬಣ್ಣದ ಚೌಕಳಿ ಉಳ್ಳ ತುಂಬು ತೋಳಿನ ಶರ್ಟ್, ರಕ್ತದ ಕಲೆ ಇರುವ ನೀಲಿ ಬಣ್ಣದ ಬನಿಯನ್ , ರಕ್ತದ ಕಲೆ ಇರುವ ನಿಲಿ ಬಣ್ಣದ ಕಾಟನ್ ಜೀನ್ಸ್ , ರಕ್ತದ ಕಲೆ ಇರುವ ನೀಲಿ ಬಣ್ಣದ ಅಂಡರ ವೇರ್, ಮೃತನ ಪ್ಯಾಂಟ್ ನಲ್ಲಿ ಮೆಟಲ್ ಬಕಲ್ ಇರುವ ಕಪ್ಪು ಬಣ್ಣದ ಬೆಲ್ಟ್, ಪ್ಯಾಂಟ್ ನ ಬಲ ಲೂಪ್ಸ್ ನಲ್ಲಿ ಕೀ ಬಂಚ್ ಇದ್ದು ಇದರಲ್ಲಿ ಟಿ.ವಿ.ಎಸ್. ಕೀ ಇರುತೆ , ಎಡಗೈನಲ್ಲಿ ಕಪ್ಪು ಬಣ್ಣದ ಸ್ಟ್ರಾಪ್ಟ

ವಾಚ್ ಇದ್ದು ರಕ್ತದ ಕಲೆ ಆಗಿರುತ್ತೆ ಮತ್ತು ಎರಡೂ ಕಾಲುಗಳಲ್ಲಿ ಕಪ್ಪು ಬಣ್ಣದ ಚಪ್ಪಲಿಗಳನ್ನು ನಾನು ನೋಡಿರುವುದಿಲ್ಲ.

ಈಗ ನ್ಯಾಯಾಲಯದ ಮುಂದೆ ನನಗೆ ತೋರಿಸಿದ ಬಲಗೈನಲ್ಲಿ ಬೆಳ್ಳಿಯಂತಹ ಬಳೆ ಹಾಗೂ ಕಿವಿಗಳಲ್ಲಿ ಯಾವುದೇ ಲೋಹದ ಒಂದು ಜೊತೆ ರಿಂಗುಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

ಶವದ ಮೇಲೆ ಎಲ್ಲೆಲ್ಲಿ ಗಾಯಗಳಿತ್ತು ಅಂತ ನಾನು ನೋಡಿಲ್ಲ. ಮೃತ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ಮೃತ ವ್ಯಕ್ತಿಯ ಸಾವಿಗೆ ಏನು ಕಾರಣ ಅಂತ ನಾನು ತಿಳಿದುಕೊಳಲಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಶವ ಮಹಜರ್ ಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಶವ ಮಹಜರ್ ನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ಪೊಲೀಸರು ನನಗೆ ನಿಪಿ.1 ರಂತೆ ನೋಟಿಸನ್ನು ಕೊಟ್ಟು ಪಂಚನಾಮೆಗೆ ಕರೆಸಿಕೊಂಡಿದ್ದಾಗ, ಸತ್ತ ವ್ಯಕ್ತಿ ಯಾರು ಹಾಗೂ ಯಾವ ಕಾರಣಕ್ಕೆ ಸತ್ತಿದ್ದು ಎಂಬ ವಿಷಯವನ್ನು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಈಗ ತೋರಿಸಿದ ನಿಪಿ.2 ಫೋಟೋದಲ್ಲಿ ಕಾಣುವ ಮಹಿಳೆಯು ಮೃತ ಅಕ್ಷಯ್ ನ ಹೆಂಡತಿಯಾಗಿದ್ದು ಅವರು ಪೊಲೀಸರಿಗೆ ತೋರಿಸಿದ ಜಾಗದ ಮೇರೆಗೆ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. " ದಿನಾಂಕ 22.062021 ರಂದು ಮದಾ್ಯಹ್ನ 1.00 ಗಂಟೆಯಲ್ಲಿ ಅಕ್ಷಯ್ ಕೆಲಸಕ್ಕೆ ಹೋಗುತ್ತೇನೆಂದುಎ ಹೇಳಿ ಹೋದವನು ರಾತ್ರಿಯಾದರು ವಾಪಾಸ್ ಮನೆಗೆ ಬಂದಿರುವುದಿಲ್ಲ. ದಿನಾಂಕ 23.06.2021 ರಂದು ಪೂಜಾ ಅಕ್ಷಯ್ ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಹೋಗಿ ಅಲ್ಲಿನ ಮ್ಯಾನೇಜರ್ ರವರನ್ನು ವಿಚಾರ ಮಾಡಿದಾಗ ಅಕ್ಷಯ್ ದಿನಾಂಕ 22.06.2021 ರಂದು ಸಂಜೆ 6.00 ಗಂಟೆಯಲ್ಲಿ ಪೂಜಾಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು ಹೇಳಿ ಹೋದವರು ಕೆಲಸಕ್ಕೆ ಬಂದಿರುವುದಿಲ್ಲ ತಿಳಿಸಿದ್ದು, ಅಕ್ಷಯ್ ರವರು ವಾಪಾಸ್ ಮನೆಗೆ ಬರದ ಕಾರಣ ದಿನಾಂಕ 24.06.2021 ರಂದು ಬೆಳಗ್ಗೆ 8.00 ಗಂಟೆಯಲ್ಲಿ ಪಿರ್ಯಾದಿ ಪೂಜಾ ಮತ್ತು ಕಿರಣ್ ರವರು ದೂರು ಕೊಡುವ ಸಲುವಾಗಿ ಮಂಡ್ಯ

ಪಶ್ಚಿಮ ಪೊಲೀಸ್ ಠಾಣಾಗೆ ಹೋಗಲು ಸಂಜಯ್ ಸರ್ಕಲ್ ಬಳಿ ಹೋಗುತ್ತಿದ್ದಾಗ ಅಲ್ಲಿ ಯಾರೋ ಸಾರ್ವಜನಿಕರು ಸುಂಡಹಳ್ಳಿಯ ಕಾಲುವೆಯ ಬಳಿ ಯಾವುದೋ ಗಂಡಸಿನ ಶವ ಇದೆ ಎಂದು ಮಾತನಾಕೊಳ್ಳುತ್ತಿದ್ದ ವಿಚಾರ ಗೊತ್ತಾಗಿ , ಪೂಜಾ ಮತ್ತು ಕಿರಣ್ ರವರು ಬೈಕ್ ನಲ್ಲಿ ಸುಂಡಹಳ್ಳಿಯ ವಿ.ಸಿ ಚಾನಲ್ ಏರಿಯ ಕೆಳಗೆ ಹಾದು ಹೋಗಿರುವ ಚಿಕ್ಕ ಕಾಲುವೆಯ ಬಳಿ ಹೋಗಿ ನೋಡಿದಾಗ ಯಾರೋ ದುಷರ್ಮಿಗಳು ಯಾವುದೋ ಆಯುಧದಿಂದ ಅಕ್ಷಯ್ ಚನ್ನಪ್ಪರವರ ದೇಹಕ್ಕೆ ಹಿರಿದು ಕೊಲೆ ಮಾಡಿ, ಶವವನ್ನು ಕಾಲುವೆ ಏರಿಯ ಕೆಳಗಿನ ಸಣ್ಣ ಕಾಲುವೆಗೆ ಬಿಸಾಡಿ ಹೋಗಿರುತ್ತಾರೆಂದು ತಿಳಿದು ಬಂದಿರುತ್ತೆ " ಅಂತ ಪಂಚನಾಮೆ ಕಾಲದಲ್ಲಿ ಚಾಸಾ.1 ನನ್ನ ಮುಂದೆ ಪೊಲೀಸರಿಗೆ ತಿಳಿಸಿದರು ಎಂದರೆ ಸರಿಯಲ್ಲ.

ಅದೇ ರೀತಿ ಶವ ದೊರೆತ ಸ್ಥಳದಲ್ಲಿ ಪೊಲೀಸರು ನಿಪಿ.4 ರಂತೆ ಶವ ಪಂಚನಾಮೆಯನ್ನು ಮಾಡುವ ಕಾಲಕ್ಕೆ , ಈಗ ನ್ಯಾಯಾಲಯದ ಮುಂದೆ ಇರುವ ರಕ್ತಸಿಕ್ತವಾದ ಮಣ್ಣನ್ನು, ರಕ್ತ ಕಲೆ ಇರುವ ಒಂದು ಹಿಡಿಯಷ್ಟು ಗಾತ್ರದ ಕಾಡು ಕಲ್ಲು, ರಕ್ತ ಕಲೆ ಇರುವ ಎರಡು ಹಿಡಿಯಷ್ಟು ಗಾತ್ರದ ಒಂದು ಕಾಡು ಕಲ್ಲು, ರಕ್ತದ ಕಲೆ ಇರುವ ಹಳದಿ ಬಣ್ಣದ 150 ಎಂ.ಎಲ್ ನ ಫ್ರೂಟಿಯ ಖಾಲಿ ಟೆಟ್ರಾ ಪ್ಯಾಕ್, ರಕ್ತದ ಕಲ ಇರುವ ಹಳದಿ ಬಣ್ಣದ 180 ಎಂ.ಎಲ್ ನ ಓಲ್ಡ್ ಅಡ್ಮಿರಲ್ ಬ್ರಾಂದಿಯ ಟೆಟ್ರಾ ಪ್ಯಾಕ್, ರಕ್ತದಂತಹ ಕಲೆಯಾಗಿದ್ದ ಒಂದು ಹಿಡಿಯಷ್ಟು ರಕ್ತ ಮಿಶ್ರಿತ ಮಣ್ಣು ಮತ್ತು ಒಂದು ಹಿಡಿಯಷ್ಟು ಸಾದಾ ಮಣ್ಣನ್ನು ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ನಮ್ಮ ಸಮಕ್ಷಮದಲ್ಲಿ ಜಪ್ತಿ ಮಾಡಿದ ಕಾರಣ ಪಂಚನಾಮೆ ಚೀಟಿಗೆ ಪೊಲೀಸರು ನನ್ನ ಸಹಿಯನ್ನು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ.

(ನ್ಯಾಯಾಲಯದ ಮುಂಜಾನೆಯ ಕಲಾಪದ ಅವದಿ ಮುಗಿದಿದ್ದರಿಂದ ವಿಚಾರಣೆಯನ್ನು ಮದ್ಯಾಹ್ನದ ಅವದಿಗೆ ಮುಂದೂಡಲಾಯಿತು)

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 28.06.2022 ರಂದು ಮದ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಗಿದೆ</u>

<u>ಮುಂದುವರಿದ ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನಿಶಾನೆ.ಪಿ.4 ಪಂಚನಾಮೆ ಸಮಯದಲ್ಲಿ ಪೊಲೀಸರು, ಸದರಿ ಪ್ರಕರಣದ ನ್ಯಾಯಾಲಯದ ಕಡತದಲ್ಲಿರುವ ಫೋಟೋಗಳನ್ನು, ನಮ್ಮನ್ನು ನಿಲ್ಲಿಸಿ ನಮ್ಮ ಮುಂದೆ ಪಂಚನಮೆಯನ್ನು ಮಾಡುತ್ತಿರುವುದಾಗಿ ತೋರಿಸಲು ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಸದರಿ ನಿಶಾನೆ.ಪಿ.4 ಪಂಚನಾಮೆಯನ್ನು ದಿನಾಂಕ 24.06.2021 ರಂದು ಬೆಳಗ್ಗೆ 10.00 ಗಂಟೆಯಿಂದ 10.45 ಗಂಟೆವರೆಗೆ ಮಾಡಲಾಯಿತು ಎಂದರೆ ಸಾಕ್ಷಿಯು ಬೆಳಗ್ಗೆ 11.00 ಗಂಟೆಗೆ ಮಾಡಲಾಯಿತು ಎಂದು ಉತ್ತರಿಸುತ್ತಾರೆ. ನಿಪಿ.5 ಶವ ಪಂಚನಾಮೆಯನ್ನು ಅದೇ ದಿವಸ ಅಂದರೆ ದಿನಾಂಕ 24.06.2021 ರಂದು ಬೆಳಗ್ಗೆ 10.50 ರಿಂದ 12.45 ವರೆಗೆ ಮಾಡಿದರು ಎಂದರೆ ಸಾಕ್ಷಿಯು ನಾನು ಬೆಳಗ್ಗೆ 11.30 ಗಂಟೆಯಲ್ಲಿ ಶವ ಪಂಚನಾಮೆಗೆ ಸಹಿ ಮಾಡಿ ಹೊರಟು ಹೋದೆನು ಎನ್ನುತ್ತಾರೆ. ಅದೇ ದಿವಸ ನಿಶಾನೆ.ಪಿ.5 ಶವ ಪಂಚನಮೆಯನ್ನು ಪೊಲೀಸರು ಮಾಡುವ ಕಾಲಕ್ಕೆ ಗಮನಿಸಲಾಗಿ ಶವದ ಕಣ್ಣಿನ ಬಳಿ , ಎಡಮೊಣಕೈ ಮೇಲೆ, ಎಡಮೊಣಕೈ ಮೇಲ್ಬಾಗ, ಎಡಹೊಟ್ಟೆಯ ಮೇಲೆ, ಎದೆಯ ಮಧ್ಯ ಭಾಗ, ಕುತ್ತಿಗೆಯ ಕೆಳಭಾಗ, ಬೆನ್ನಿನ ಮಧ್ಯಭಾಗ, ಎಡ ಕುಂಡಿಯ ಮೇಲೆ, ಬೆನ್ನಿನ ಎಡ ಹಿಂಭಾಗ, ಎಡಗೈ ಹೆಬ್ಬೆಟ್ಟಿನ ಕಳೆಗೆ , ಬಲ ತಲೆಯ ಮೇಲೆ ಈ ಎಲ್ಲಾ ಕಡೆಗಳಲ್ಲಿ ಗಾಯಗಳು ಆಗಿರುವುದನ್ನು ನಾನು ಗಮನಿಸಿದ್ದೆನು ಎಂದರೆ ಸರಿಯಲ್ಲ ಹಾಗೂ ಶವದ ಕರುಳು ಹೊರಗೆ ಬಂದಿದ್ದನ್ನು ಸಹಾ ನಾನು ಗಮನಿಸಿದ್ದೆನು ಎಂದರೆ ಸರಿಯಲ್ಲ. ನಿಪಿ.5 ಶವ ಪಂಚನಾಮೆ ಕಾಲಕ್ಕೆ, ಪೊಲೀಸರು ಶವದ ಮೇಲಿನ ಗಾಯಗಳು ಕಾಣಿಸುವಂತೆ ಈಗ ಕಡತದಲ್ಲಿರುವ ಒಟ್ಟು 6 ಫೋಟೋಗಳನ್ನು ನನ್ನ ಸಮಕ್ಷಮದಲ್ಲಿ ತೆಗೆದಿದ್ದರು ಎಂದರೆ ಸರಿಯಲ್ಲ. ಶವದಲ್ಲಿ ಮೇಲಿದ್ದ ಬೆಲ್ಟ್ ಕಾಣಿಸುವಂತೆ ಪೊಲೀಸರು ಕಡತದಲ್ಲಿರುವ ಈ ಫೋಟೋವನ್ನು ನನ್ನ ಮುಂದೆ ತೆಗೆದಿದ್ದರು ಎಂದರೆ ಸರಿಯಲ್ಲ. ಶವ ಪಂಚನಾಮೆ ಕಾಲದಲ್ಲಿ ಶವದ ಮೇಲೆ ಇದ್ದ ಈಗ ನ್ಯಾಯಾಲಯಾದ ಮುಂದೆ ಇರುವ ಹರಿದಿದ್ದ ಬಟ್ಟೆಗಳು, ರಕ್ತದ ಕಲೆ ಇರುವ ಮಾಸಲು ಹಸಿರು , ನೀಲಿ, ಬಿಳಿ ಬಣ್ಣದ ಚೌಕಳಿ ಉಳ್ಳ ತುಂಬು ತೋಳಿನ ಶರ್ಟ್, ರಕ್ತದ ಕಲೆ ಇರುವ ನೀಲಿ ಬಣ್ಣದ ಬನಿಯನ್ , ರಕ್ತದ ಕಲೆ ಇರುವ ನೀಲಿ ಬಣ್ಣದ ಕಾಟನ್ ಜೀನ್ಸ್, ರಕ್ತದ ಕಲೆ ಇರುವ ನೀಲಿ ಬಣ್ಣದ ಅಂಡರ ವೇರ್, ಮೃತನ ಪ್ಯಾಂಟ್ ನಲ್ಲಿ ಮೆಟಲ್ ಬಕಲ್ ಇರುವ ಕಪ್ಪು ಬಣ್ಣದ ಬೆಲ್ಟ್, ಪ್ಯಾಂಟ್ ನ ಬಲ ಲೂಪ್ಸ್‌ನಲ್ಲಿ ಕೀ ಬಂಚ್ ಇದ್ದು ಇದರಲ್ಲಿ ಟಿ.ವಿ.ಎಸ್. ಕೀ ಇರುತೆ, ಎಡಗೈನಲ್ಲಿ ಕಪ್ಪು ಬಣ್ಣದ ಸ್ಮಾರ್ಟ್ ವಾಚ್ ಇದ್ದು ರಕ್ತದ ಕಲೆ ಆಗಿರುತ್ತೆ ಮತ್ತು ಎರಡೂ ಕಾಲುಗಳಲ್ಲಿ

ಕಪ್ಪು ಬಣ್ಣದ ಚಪ್ಪಲಿಗಳನ್ನು ಮತ್ತು ಬಲಗೈಯಲ್ಲಿ ಇರುವ ಬೆಳ್ಳಿಯಂತಹ ಬಳೆ ಮತ್ತು ಕಿವಿಯಲ್ಲಿದ್ದ ಒಂದು ಜೊತೆ ಲೋಹದ ರಿಂಗುಗಳನ್ನು ನಮ್ಮ ಸಮಕ್ಷಮದಲ್ಲಿ ಪೊಲೀಸರು ಜಪ್ತಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

ಮೃತನ ಹೆಸರು ಅಕ್ಷಯ್ ಎಂದು ಹಾಗೂ ಸ್ಥಳದಲ್ಲಿದ್ದ ಮಹಿಳೆ ಮೃತನ ಹೆಂಡತಿ ಪೂಜಾ ಆಗಿದ್ದರು ಸಹಾ ಮೃತನು ಕೊಲಲ್ಪಟ್ಟಿದ್ದ ಎಂದು ಈ ಪ್ರಕರಣಕ್ಕೆ ಕಾರಣವಾದ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿ ನಿಪಿ.4 ಮತ್ತು ನಿಪಿ.5 ಪಂಚನಾಮೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತಿಲ್ಲ. ಆರೋಪಿತನ ಕೋರಿಕೆಯ ಮೇರೆಗೆ ಭಾಗಶಃ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿಯ ಪರವಾಗಿ ಆರೋಪಿಯ ವಕೀಲರಾದ ಶ್ರೀ ಹೆಚ್.ಎಂ.ಎಲ್ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ, ಆದರೆ ಯಾವುದೇ ಸಕಾರಣವನ್ನು ನೀಡದೇ ಇರುವುದರಿಂದ, ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲನ್ನು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.